No:Compt/Uplok/BCD-2900/2019/ARLO-1

# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–2900/2019/ಎ.ಆರ್.ಎಲ್.ಒ–1. ದಿನಾಂಕ:17–05–2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:**– ಶ್ರೀ ಬಸವರಾಜು ಎನ್. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ:160, ರಾಜರಾಜೇಶ್ವರಿ ನಗರ ಉಪ–ವಿಭಾಗ, ಬಿಬಿಎಂಪಿ., ಬೆಂಗಳೂರು ರವರು ದುರ್ನಡತೆ ಎಸಗಿರುವ ಬಗ್ಗೆ

******

ಶ್ರೀ ಶಿವಪ್ರಸಾದ್ ಶೆಟ್ಟಿ, ನಂ:219, ಶೋಭ ಕೊರಲ, ಜಕ್ಕೂರು, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು ಶ್ರೀ ಬಸವರಾಜು ಎನ್. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ನಂ:160, ರಾಜರಾಜೇಶ್ವರಿ ನಗರ ಉಪ–ವಿಭಾಗ, ಬಿಬಿಎಂಪಿ., ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ದ ದೂರುದಾರರ ಪಕ್ಕದ ಮನೆಯ ನೆರೆಯವರು ಯಾವುದೇ ಸೆಟ್ ಬ್ಯಾಕ್ ಬಿಡದೇ ದೂರುದಾರರ ಸ್ವತ್ತನ್ನು ಅತಿಕ್ರಮಿಸಿಕೊಂಡು ಅಕ್ರಮ ಕಟ್ಟಡ ಕಟ್ಟುತ್ತಿರುವ ಬಗ್ಗೆ ದೂರು ನೀಡಿದರೂ ಸಹ ಯಾವುದೇ ಕ್ರಮ ಕೊಳ್ಳದೇ ಇರುವುದರಿಂದ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. **ದೂರಿನ ಸಂಕ್ಷಿಪ್ತ ವಿವರ:**– ದೂರುದಾರರ ಆಪಾದನೆ ಏನೆಂದರೆ, ದೂರುದಾರರು ನಂ:219, ಸೋಭಾ ಕೋರಾಲ್, ಜಕ್ಕೂರು, ಬೆಂಗಳೂರು ಇಲ್ಲಿ ವಾಸವಿದ್ದು ಸದರಿಯವರ ಪಕ್ಕದ ಮನೆಯ ನೆರೆಯವರು ಯಾವುದೇ ಸೆಟ್ ಬ್ಯಾಕ್‌ಗಳನ್ನು ಬಿಡದೇ

ದೂರುದಾರರ ಸ್ವತ್ತನ್ನು ಅತಿಕ್ರಮಿಸಿಕೊಂಡು ಅಕ್ರಮ ಕಟ್ಟಡ ಕಟ್ಟುತ್ತಿದ್ದಾರೆ. ಈ ಬಗ್ಗೆ ಎದುರುದಾರರಿಗೆ ಮನವಿ ನೀಡಿದರೂ ಸಹ ಯಾವುದೆ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳಬೇಕೆಂದು ಕೋರಿಕೊಂಡಿರುತ್ತಾರೆ.

3. ಮುಂದುವರೆದು ದೂರುದಾರರು ತಮ್ಮ ದಿನಾಂಕ:2-11-2019ರ ಪತ್ರದೊಂದಿಗೆ ಆರ್.ಟಿ.ಐ. ಕಾಯ್ದೆಯಡಿಯಲ್ಲಿ ಸಹಾಯಕ ನಿರ್ದೇಶಕರು (ನಗರಯೋಜನೆ), ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ.,ಬೆಂಗಳೂರು ರವರಿಂದ ಪಡೆದಿರುವ ದಿನಾಂಕ:30-10-2019 ರ ಮಾಹಿತಿ ಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ಮಾಹಿತಿ ಪತ್ರವನ್ನು ಪರಿಶೀಲಿಸಿದಾಗ, ವಾರ್ಡ್ ನಂ:160 ರಲ್ಲಿನ ನಂ:06, 1ನೇ ಮುಖ್ಯ ರಸ್ತೆ, ಸಂಪಿಗೆ ರಸ್ತೆ, ಗಿರಿಧಾಮ ಲೇಔಟ್, ಆರ್.ಆರ್. ನಗರ, ಬೆಂಗಳೂರು -98 ಕ್ಕೆ ಸಂಬಂಧಿಸಿದಂತೆ ಸಹಾಯಕ ನಿರ್ದೇಶಕರು (ನಗರ ಯೋಜನೆ), ಬಿಬಿಎಂಪಿ.,ರಾಜರಾಜೇಶ್ವರಿನಗರ ವಲಯ, ಬೆಂಗಳೂರು ರವರ ಕಛೇರಿಯಿಂದ ನಕ್ಷೆ ಅನುಮೋದನೆ ನೀಡಿರುವ ಬಗ್ಗೆ ಯಾವುದೆ ಮಾಹಿತಿ ಇಲ್ಲವೆಂದು ಮಾಹಿತಿ ನೀಡಿರುವುದು ಕಂಡುಬರುತ್ತದೆ.

4. ಸದರಿ ದೂರಿನ ಮೇಲೆ ಎದುರುದಾರರು ತಮ್ಮ ದಿನಾಂಕ:12-12-2019 ರ ಆಕ್ಷೇಪಣೆಯಲ್ಲಿ ದೂರುದಾರರ ದೂರಿಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲಿಸಿ, ಕಟ್ಟಡಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸುವಂತೆ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ನೋಟಿಸ್ ಜಾರಿ ಮಾಡಿ ಮಾಲೀಕರು ಯಾವುದೆ ಉತ್ತರ ನೀಡಿಲ್ಲದಿದ್ದ ಕಾರಣ ಕಟ್ಟಡದ ನಿರ್ಮಾಣವನ್ನು ಅನಧಿಕೃತ ಎಂದು ಪರಿಗಣಿಸಿ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2) ರಡಿಯಲ್ಲಿ ತಾತ್ಕಾಲಿಕ ಆದೇಶವನ್ನು ಹೊರಡಿಸಿ ಸದರಿ ತಾತ್ಕಾಲಿಕ ಆದೇಶಕ್ಕೆ ಕಟ್ಟಡ ಮಾಲೀಕರು ಯಾವುದೇ ಸಮಜಾಯಿಷಿಯನ್ನು ನೀಡದ ಕಾರಣ ಕೆ.ಎಂ.ಸಿ. ಕಾಯ್ದೆ, ಕಲಂ 321(3) ರಡಿಯಲ್ಲಿ ತಾತ್ಕಾಲಿಕ ಆದೇಶವನ್ನು ಸ್ಥಿರೀಕರಿಸಿ ಆದೇಶ ಹೊರಡಿಸಿರುತ್ತದೆ ಹಾಗೂ ಅನಧಿಕೃತ

ಕಟ್ಟಡವನ್ನು ತೆರವುಗೊಳಿಸಲು ಕೆ.ಎಂ.ಸಿ. ಕಾಯ್ದೆ, ಕಲಂ 462 ರಡಿ ಅನುಮತಿ ಕೋರಿ ಕಡತವನ್ನು ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರನಗರ ವಿಭಾಗ ಬಿಬಿಎಂಪಿ., ಬೆಂಗಳೂರು ರವರಿಗೆ ಸಲ್ಲಿಸಿದ್ದು ಅನುಮತಿ ದೊರೆತ ನಂತರ ಸದರಿ ಅನಧಿಕೃತ ಕಟ್ಟಡವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಹೇಳಿಕೊಂಡಿರುತ್ತಾರೆ.

5. ಎದುರುದಾರರು ದಿನಾಂಕ:12–12–2019 ರಂದು ಹಾಜರುಪಡಿಸಿರುವ ಸೇವಾ ವಿವರವನ್ನು ಪರಿಶೀಲಿಸಿದಾಗ, ಎದುರುದಾರರು ದಿನಾಂಕ:1–8–2018 ರಿಂದ ರಾಜರಾಜೇಶ್ವರಿನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರು ಇಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯನಿರ್ವಹಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ಪ್ರಸ್ತುತ ದೂರನ್ನು ದೂರುದಾರರು ಈ ಶಾಖೆಗೆ ದಿನಾಂಕ:22–10–2019 ರಂದು ಸಲ್ಲಿಸಿರುವುದು ಕಂಡುಬರುತ್ತದೆ. ದೂರುದಾರರು ಪ್ರಸ್ತುತ ಪ್ರಕರಣವನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸುವ ಮುಂಚೆ ದಿನಾಂಕ:11–10–2019 ರಂದು ರಾಜರಾಜೇಶ್ವರನಗರ ಉಪವಿಭಾಗ, ಬಿಬಿಎಂಪಿ., ಬೆಂಗಳೂರಿನ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ದೂರು ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರು ನೀಡಿರುವುದು ಕಂಡುಬರುತ್ತದೆ.

7. ಎದುರುದಾರರು ತಮ್ಮ ಆಕ್ಷೇಪಣಯೊಂದಿಗೆ ಸಲ್ಲಿಸಿರುವ ಕಟ್ಟಡದ ಫೋಟೋ ಪ್ರತಿಗಳನ್ನು ಪರಿಶೀಲಿಸಿದಾಗ, ಕಟ್ಟಡದಲ್ಲಿ ಪಿಲ್ಲರ್ ಕಾಮಗಾರಿ ಪೂರ್ಣವಾಗಿದ್ದು ಆರ್.ಸಿ.ಸಿ.ಯವರೆಗೂ ಕಾಮಗಾರಿ ನಡೆದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

8. ಎದುರುದಾರರು ಹಾಜರುಪಡಿಸಿರುವ ಕೆ.ಎಂ.ಸಿ. ಕಾಯ್ದೆ ಕಲಂ 321(1), 321(2) ಮತ್ತು 321(3) ರಲ್ಲಿ ಹೊರಡಿಸಿರುವ ಆದೇಶವನ್ನು ಪರಿಶೀಲಿಸಿದಾಗ, ಪ್ರಸ್ತುತ ಎದುರುದಾರರೆ ದಿನಾಂಕ:30–10–2019 ರಂದು ಕೆ.ಎಂ.ಸಿ. ಕಾಯ್ದೆ, ಕಲಂ 321(1)

ಮತ್ತು 321(2) ರಡಿಯಲ್ಲಿ ಸದರಿ ಕಟ್ಟಡವು ಅನಧಿಕೃತ ಕಟ್ಟಡವೆಂದು ತಾತ್ಕಾಲಿಕ ಆದೇಶ ಹೊರಡಿಸಿರುವುದು ಕಂಡುಬರುತ್ತದೆ. ಪ್ರಸ್ತುತ ಎರುದುದಾರರೆ ದಿನಾಂಕ: 05-11-2019 ರಂದು ಕೆ.ಎಂ.ಸಿ. ಕಾಯ್ದೆ, ಕಲಂ 321(3)ರಡಿಯಲ್ಲಿ ಸ್ಥಿರೀಕರಣ ಆದೇಶ ಹೊರಡಿಸಿರುವುದು ಕಂಡುಬರುತ್ತದೆ.

9. ಎದುರುದಾರರು ಹಾಜರುಪಡಿಸಿರುವ ದಿನಾಂಕ:11-10-2019 ರ ಕೆ.ಎಂ.ಸಿ. ಕಾಯ್ದೆ, ಕಲಂ 308 ರ ನೋಟಿಸ್‌ಅನ್ನು ಪರಿಶೀಲಿಸಿದಾಗ, ಪ್ರಸ್ತುತ ಎದುರುದಾರರು ಕಟ್ಟಡದ ಮಾಲೀಕರಿಗೆ ಸಂಬಂಧಪಟ್ಟ ದಾಖಲೆಯನ್ನು ಹಾಜರುಪಡಿಸುವಂತೆ ಕಾಲಾವಕಾಶ ನೀಡಿ ನೋಟಿಸ್ ನೀಡಿರುವುದು ಕಂಡುಬರುತ್ತದೆ.

10. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ದೂರುದಾರರು ಪ್ರಸ್ತುತ ದೂರನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸುವ ಮುಂಚೆ ರಾಜರಾಜೇಶ್ವರಿನಗರ ಬಿಬಿಎಂಪಿ., ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಅಕ್ರಮ ಕಟ್ಟಡಕ್ಕೆ ಸಂಬಂಧಪಟ್ಟಂತೆ ನೀಡಿರುವ ದೂರು ದಿನಾಂಕ:11-10-2019 ರಂದೆ ಸದರಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಿರುವುದು ಕಂಡುಬರುತ್ತದೆ. ಇದರಿಂದ ಪ್ರಸ್ತುತ ಎದುರುದಾರರು ದೂರು ಕಟ್ಟಡದ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ದೂರುದಾರರು ತಮಗೆ ಅಕ್ರಮ ಕಟ್ಟಡದ ಬಗ್ಗೆ ದೂರು ಕೊಡುವ ಮುಂಚೆ ಅಕ್ರಮ ಕಟ್ಟಡವನ್ನು ತಡೆಯಲು ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದು ಸ್ಪಷ್ಟವಾಗಿ ಸದರಿಯವರು ಹಾಜರುಪಡಿಸಿರುವ ಕಟ್ಟಡದ ಫೋಟೋ ಪ್ರತಿಗಳಿಂದ ಕಂಡುಬರುತ್ತದೆ. ಕಾರಣ ದೂರು ಕಟ್ಟಡಕ್ಕೆ ಸಂಬಂಧಪಟ್ಟಂತೆ ಎದುರುದಾರರು ದಿನಾಂಕ:11-10-2019 ರಂದು ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಿದ್ದು ಸದರಿ ಎದುರುದಾರರು ರಾಜರಾಜೇಶ್ವರಿನಗರ ಉಪವಿಭಾಗದಲ್ಲಿ ದಿನಾಂಕ:01-08-2018 ರಿಂದಲೂ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬರುತ್ತದೆ. ಈ

ಕಾರಣದಿಂದ ಎದುರುದಾರರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಆಗುವ ಅನಧಿಕೃತ ಕಾಮಗಾರಿಗಳನ್ನು ತಡೆಯಲು ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ಮುಂದುವರೆದು, ಎದುರುದಾರರು ತಮ್ಮ ದಿನಾಂಕ:20-12-2021 ರ ವರದಿಯಲ್ಲಿ ತಾವು ಈಗಾಗಲೇ ಕೆ.ಎಂ.ಸಿ. ಕಾಯ್ದೆ ಅಡಿಯಲ್ಲಿ ಕ್ರಮ ತೆಗೆದುಕೊಂಡಿರುವುದಾಗಿ ಹೇಳಿಕೊಂಡಿರುತ್ತಾರೆ. ಕಟ್ಟಡದ ಮಾಲೀಕರು ತಮ್ಮ ಕಛೇರಿಯಿಂದ ಹೊರಡಿಸಿದ ಸ್ಥಿರೀಕರಣ ಆದೇಶದ ವಿರುದ್ಧ ಮಾನ್ಯ ಕೆ.ಎ.ಟಿ. ನ್ಯಾಯಾಲಯದಲ್ಲಿ REV.APPL No:1082/2019 ರಂತೆ ಪ್ರಕರಣ ದಾಖಲಿಸಿದ್ದು ಮಾನ್ಯ ನ್ಯಾಯಾಲಯವು ಸ್ಥಿರೀಕರಣ ಆದೇಶವನ್ನು ರದ್ದುಗೊಳಿಸಿ ಮತ್ತೊಮ್ಮೆ ವಿಚಾರಣೆ ನಡೆಸಲು ಕಡತವನ್ನು ರೆಮ್ಯಾಂಡ್ ಮಾಡಿದ್ದರಿಂದ ಮಂಜೂರಾತಿ ನಕ್ಷೆ ಸೇರಿದಂತೆ ಅಗತ್ಯ ದಾಖಲೆಗಳನ್ನು ಮತ್ತೊಮ್ಮೆ ಸಲ್ಲಿಸಲು ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ ಕಾಯ್ದೆ ಕಲಂ 308 ರಡಿಯಲ್ಲಿ ನೋಟಿಸ್ ನೀಡಿದ್ದು ಮಾಲೀಕರಿಗೆ ದಾಖಲೆಗಳನ್ನು ಸಲ್ಲಿಸಲು ನೀಡಲಾಗಿರುವ ಗಡವು ಪೂರ್ಣಗೊಂಡ ನಂತರ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2) ಮತ್ತು 321(3) ರಂತೆ ಮುಂದಿನ ಕ್ರಮ ಜರುಗಿಸಲಾಗುವುದೆಂದು ತಮ್ಮ ದಿನಾಂಕ:9-3-2021 ರ ಪತ್ರದಲ್ಲಿ ಹೇಳಿರುವುದಾಗಿ ಹೇಳಿಕೊಂಡಿರುತ್ತಾರೆ.

12. ಬಿಬಿಎಂಪಿ., ಕಾಯ್ದೆ, 2020 ರನ್ವಯ ಕ್ರಮ ಜರುಗಿಸುವ ಅಧಿಕಾರವನ್ನು ಸಹಾಯಕ ನಿರ್ದೇಶಕರು (ನಗರಯೋಜನೆ) ರವರಿಗೆ ಅಧಿಕಾರ ಪ್ರತ್ಯೋಜನೆ ಮಾಡಿ ಮತ್ತೆ ಆಯಾಯಾ ಉಪವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮಾರ್ಪಡು ಅಧಿಕಾರಿ ಪ್ರತ್ಯೋಜನೆ ಹೊರಡಿಸಿರುವುದರಿಂದ ಸದರಿ ಕಟ್ಟಡದ ವಿರುದ್ಧ ಕ್ರಮ ಜರುಗಿಸಲು ವಿಳಂಬವಾಗಿರುತ್ತದೆಂದು ಹೇಳಿಕೊಂಡಿರುತ್ತಾರೆ. ಆದರೆ, ಎದುರುದಾರರು ಹಾಜರುಪಡಿಸಿರುವ ಕೆ.ಎ.ಟಿ. ನ್ಯಾಯಾಲಯದ REV.APPL No:1082/2019 ರ ದಿನಾಂಕ:14-7-2020 ರ ತೀರ್ಪು ಅನ್ನು ಪರಿಶೀಲಿಸಿದಾಗ, ಎದುರುದಾರರು ಹೊರಡಿಸಿರುವ ದಿನಾಂಕ:5-11-2019 ರ ಆದೇಶವನ್ನು, ಸದರಿ

ಆದೇಶ ಹೊರಡಿಸುವ ಮುಂಚೆ ನಿಯಮಗಳು ಪಾಲಿಸದೇ ಹಾಗೂ ಕಟ್ಟಡದ ಮಾಲೀಕರಿಗೆ ಸರಿಯಾದ ಅವಕಾಶ ನೀಡದೇ ಹೊರಡಿಸಿದ್ದಾರೆ ಎನ್ನುವ ಕಾರಣಕ್ಕಾಗಿ ಎದುರುದಾರರು ಹೊರಡಿಸಿರುವ ಸ್ಥಿರೀಕರಣ ಆದೇಶವು ವಜಾಗೊಂಡಿರುವುದು ಕಂಡುಬರುತ್ತದೆ.

13. ಇಲ್ಲಿ ಮುಖ್ಯವಾಗಿ ಗಮನಿಸಿಬೇಕಾದ ಅಂಶವೇನೆಂದರೆ, ಈಗಾಗಲೇ ಮೇಲೆ ಚರ್ಚಿಸಿರುವಂತೆ ಪ್ರಸ್ತುತ ಪ್ರಕರಣವನ್ನು ದೂರುದಾರರು ಈ ಪ್ರಾಧಿಕಾರಕ್ಕೆ ಸಲ್ಲಿಸುವ ಸುಮಾರು 14 ತಿಂಗಳ ಹಿಂದಿನಿಂದಲೇ ಎದುರುದಾರರು ದೂರು ಕಟ್ಟಡ ವ್ಯಾಪ್ತಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮೇಲಾಗಿ, ಪ್ರಸ್ತುತ ದೂರುದಾರರು ಎದುರುದಾರರಿಗೆ ಅಕ್ರಮ ಕಟ್ಟಡದ ಬಗ್ಗೆ ದೂರು ನೀಡಿದ ನಂತರವಷ್ಟೆ ಕೆ.ಎಂ.ಸಿ. ಕಾಯ್ದೆ, ಕಲಂ 308 ರಡಿಯಲ್ಲಿ ಕಟ್ಟಡದ ಮಾಲೀಕರಿಗೆ ನೋಟಿಸ್ ನೀಡಿ ನಂತರ ಕೆ.ಎಂ.ಸಿ. ಕಾಯ್ದೆ, ಕಲಂ 321(1), 321(2) ರಡಿಯಲ್ಲಿ ತಾತ್ಕಾಲಿಕ ಆದೇಶ ಹಾಗೂ 321(3) ರಡಿಯಲ್ಲಿ ಸ್ಥಿರೀಕರಣ ಆದೇಶವನ್ನು ಹೊರಡಿಸಿರುವುದನ್ನು ಬಿಟ್ಟರೇ ದೂರು ಕಟ್ಟಡದ ಅನಧಿಕೃತ ಕಟ್ಟಡವನ್ನು ಕಟ್ಟಡದ ಪ್ರಾರಂಭದ ಹಂತದಿಂದಲೇ ತಡೆಯದೇ ಪಿಲ್ಲರ್ ನಂತರ ಆರ್.ಸಿ.ಸಿ. ಮಟ್ಟದವರೆಗೂ ಕಟ್ಟಡವನ್ನು ನಿರ್ಮಾಣ ಮಾಡಲು ಅವಕಾಶ ನೀಡಿ ಆರ್.ಸಿ.ಸಿ. ಕಾಮಗಾರಿಯನ್ನು ಸಹ ತಡೆಯದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

14. ಎದುರುದಾರರು ಹಾಜರುಪಡಿಸಿರುವ ದಿನಾಂಕ:18–1–2020 ರ ಕೆ.ಎಂ.ಸಿ. ಕಾಯ್ದೆ ಕಲಂ 462 ರ ಆದೇಶವನ್ನು ಪರಿಶೀಲಿಸಿದಾಗ, ಅನಧಿಕೃತ ಕಟ್ಟಡವನ್ನು ಹೊಡೆದು ಹಾಕಲು ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಎದುರುದಾರರಿಗೆ ಕಾರ್ಯಪಾಲಕ ಅಭಿಯಂತರರು ಅಧಿಕಾರ ನೀಡಿರುವುದು ಕಂಡುಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಕ್ರಮವಾಗಿ ನಿರ್ಮಾಣವಾಗುತ್ತಿದ್ದ ಕಟ್ಟಡದ ಕಾಮಗಾರಿಯನ್ನು ಕಟ್ಟಡದ ಆರಂಭದಲ್ಲಿಯೇ ತಡೆಯದೇ ಕೇವಲ ಕೆ.ಎಂ.ಸಿ. ಕಾಯ್ದೆ ಕಲಂ 308

ರಡಿಯಲ್ಲಿ ನೋಟಿಸ್ ಹಾಗೂ 321(1), 321(2) ರಡಿಯಲ್ಲಿ ತಾತ್ಕಾಲಿಕ ಆದೇಶ ಹಾಗೂ 321(3) ರಡಿಯಲ್ಲಿ ಸ್ಥಿರೀಕರಣ ಆದೇಶ ಹೊರಡಿಸಿ ಎದುರುದಾರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

15. ಎದುರುದಾರರಾದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕರ್ತವ್ಯದ ಬಗ್ಗೆ ಬಿಬಿಎಂಪಿ, ಆಯುಕ್ತರವರ ಕಛೇರಿಯ ಸಂಬಂಧಪಟ್ಟ ಸುತ್ತೋಲೆ ಹಾಗೂ ಕಛೇರಿ ಆದೇಶವನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಬಿಬಿಎಂಪಿ., ಆಯುಕ್ತರವರು ಕರ್ನಾಟಕ ಮುನ್ಸಿಪಾಲ್ ಕಾರ್ಪೋರೇಷನ್ ಆಕ್ಟ್, 1976 ರ ಕಲಂ 67 ರಲ್ಲಿ ನಿಹಿತವಾದ ಅಧಿಕಾರವನ್ನು ಬಳಸಿ ದಿನಾಂಕ:7–8–2015 ರಂದು ಹೊರಡಿಸಿರುವ ಕಂಡಿಕೆ–3 ಮತ್ತು 4 ರ ಸುತ್ತೋಲೆ ಈ ಕೆಳಕಂಡಂತೆ ಇರುತ್ತದೆ.

> "ಪಾಲಿಕೆಯು ಎಲ್ಲಾ ರೀತಿಯಲ್ಲಿಯೂ ಕ್ರಮ ಜರುಗಿಸುತ್ತಿರುವಾಗಲೂ ಕೂಡ ಅನಧಿಕೃತ/ನಕ್ಷೆ ಮಂಜೂರಾತಿ ಉಲ್ಲಂಘನೆ ಕಟ್ಟಡಗಳ ನಿರ್ಮಾಣವನ್ನು ನಿಯಂತ್ರಿಸಲು ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.
>
> ಈ ಹಿನ್ನಲೆಯಲ್ಲಿ ಕೆಳಕಂಡ ಮೂರು ಕ್ರಮಗಳನ್ನು ಇಂತಹ ಎಲ್ಲಾ ಪ್ರಕರಣಗಳಲ್ಲಿ ತೆಗೆದುಕೊಳ್ಳಲು ಉಪ ವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳಿಗೆ ಸೂಚಿಸಿದೆ. ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡಗಳ ನಿರ್ಮಾಣದ ಬಗ್ಗೆ ಗಮನಹರಿಸಿ, ಕಾಲಕಾಲಕ್ಕೆ ಕಟ್ಟಡದ ಹಂತಗಳ ಬಗ್ಗೆ ಕಛೇರಿ ಕಡತದಲ್ಲಿ ನಮೂದಿಸತಕ್ಕದ್ದು.
>
> ಕ್ರಮ 1:. . . . . . . . .

16. ಬಿಬಿಎಂಪಿ., ಆಯುಕ್ತರವರ ದಿನಾಂಕ:29-06-2015 ರ ಕಛೇರಿ ಆದೇಶ ಈ ಕೆಳಕಂಡಂತೆ ಇರುತ್ತದೆ.

"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ/ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ, ವ್ಯತಿರಿಕ್ತ ನಿರ್ಮಾಣ ಕಂಡುಬಂದಲ್ಲಿ ಕ್ರಮವಹಿಸುವ ಅಧಿಕಾರ ಪ್ರತ್ಯಾಯೋಜನೆಯ ಉಲ್ಲೇಖದ ಕಛೇರಿ ಆದೇಶ ಹಾಗೂ ಹಿಂದಿನ ಎಲ್ಲಾ ಸುತ್ತೋಲೆ/ಕಛೇರಿ ಆದೇಶಗಳನ್ನು ರದ್ದುಪಡಿಸಲಾಗಿದೆ. ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ 28 ವಿಭಾಗಗಳ ಕಾರ್ಯನಿರ್ವಾಹಕ ಅಭಿಯಂತರರುಗಳು ಮತ್ತು 64 ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರುಗಳು ಕಾರ್ಯನಿರ್ವಹಿಸುವ ವಿಭಾಗ/ಉಪವಿಭಾಗದ ವ್ಯಾಪ್ತಿಯಲ್ಲಿ, ಮಂಜೂರಾತಿ ಪಡೆದು ನಿರ್ಮಿಸುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ, ಮಂಜೂರಾತಿ ನಕ್ಷೆಗೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಧಿಕೃತ ನಿರ್ಮಾಣ ಕಂಡುಬಂದಲ್ಲಿ ಕೆ.ಎಂ.ಸಿ. ಕಾಯ್ದೆ, 1976 ರ ಸೆಕ್ಷನ್ 321(1) ರಂತೆ ತಾತ್ಕಾಲಿಕ ಆದೇಶ, 321(2) ರಂತೆ ಕಾರಣ ಕೇಳಿ ಪತ್ರ ಮತ್ತು 321(3) ರಂತೆ ಸ್ಥಿರೀಕರಣ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಹಾಗೂ ಸೆಕ್ಷನ್ 462 ರಂತೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಿಧಿಕೃತ ನಿರ್ಮಾಣ ತೆರವುಗೊಳಿಸುವ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವ ಅಧಿಕಾರವನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಪ್ರತ್ಯೋಯೋಜನೆಯನ್ನು ನೀಡಿ ಆದೇಶಿಸಲಾಗಿದೆ."

17. ಮೇಲ್ಕಂಡ ಬಿಬಿಎಂಪಿ., ಆಯುಕ್ತರವರ ಸುತ್ತೋಲೆ ಹಾಗೂ ಕಛೇರಿಯ ಆದೇಶವನ್ನು ಪರಿಶೀಲಿಸಿದಾಗ, ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡಗಳ ತಳಪಾಯ ತೋಡುವ ಹಂತದಿಂದಲೂ ಕಟ್ಟಡ ನಿರ್ಮಾಣದ ಬಗ್ಗೆ ಗಮನಹರಿಸಿ ವ್ಯತಿರಿಕ್ತ ನಿರ್ಮಾಣವಾಗುತ್ತಿರುವ ಕಟ್ಟಡಗಳನ್ನು ಪರಿವೀಕ್ಷಿಸಿ ವ್ಯತಿರಿಕ್ತ ನಿರ್ಮಾಣ ಕಂಡುಬಂದಲ್ಲಿ ಕ್ರಮವಹಿಸುವ ಅಧಿಕಾರ ಹೊಂದಿರುವುದು ಕಂಡುಬರುತ್ತದೆ.

18. ಮೇಲ್ಕಂಡ ಆಯುಕ್ತರು, ಬಿಬಿಎಂಪಿ, ಬೆಂಗಳೂರು ರವರ ಕಛೇರಿಯ ಸುತ್ತೋಲೆ ಪ್ರಕಾರ ಸಂಬಂಧಪಟ್ಟ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಟ್ಟಡದ ತಳಪಾಯ ತೋಡುವ ಹಂತದಿಂದಲೂ ಕಟ್ಟಡದ ನಿರ್ಮಾಣದ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಪ್ರಸ್ತುತ ಪ್ರಕರಣದಲ್ಲಿ ಈಗಾಗಲೇ ಮೇಲೆ ಚರ್ಚಿಸಿರುವಂತೆ ಎದುರುದಾರರು ಕಟ್ಟಡದ ತಳಪಾಯ ತೋಡುವ ಹಂತದಿಂದಲೂ ಕಟ್ಟಡದ ನಿರ್ಮಾಣದ ಬಗ್ಗೆ ಗಮನಹರಿಸದೇ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

19. ಮೇಲೆ ವಿವರಿಸಿದ ಕಾರಣಗಳಿಂದಾಗ, ಎದುರುದಾರರಾದ ಶ್ರೀ ಬಸವರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ಉಪ–ವಿಭಾಗ, ಬಿಬಿಎಂಪಿ, ಬೆಂಗಳೂರು ರವರ ಕೃತ್ಯವು ಕರ್ನಾಟಕ ನಾಗರೀಕ ಸೇವಾ (ನಡತೆ)ನಿಯಮ, 2021 ರ ಕಲಂ 3 (I) (i), (ii) & (iii) [ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966] ರಂತೆ ದುರ್ನಡತೆಯಾಗಿರುತ್ತದೆ ಎಂಬುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಸದರಿ ಎದುರುದಾರರ ವಿರುದ್ಧ ಕ.ಸ.ಸೇ.ನಿ ಗಳ ಅಡಿಯಲ್ಲಿ ಶಿಸ್ತು ಕ್ರಮವನ್ನು ಶಿಸ್ತು ಪ್ರಾಧಿಕಾರದ ಮೂಲಕ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(3) ರನ್ವಯ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

17/5/22

[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.